**ಸಾಕ್ಷಿಯನ್ನು ದಿಃ 05.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ ಎಲ್ ಬಿ ವಕೀಲರಿಂದಃ**

1) ನಾನು ಯಾವಾಗಲೂ ಆಟೋದಲ್ಲಿ ಓಡಾಡುತ್ತೇನೆ ಎಂದರೆ ಸರಿ. ರಸ್ತೆಗೂ ಸುರಗಿ ಫಾರೆಸ್ಟ್ ಗೂ ಸುಮಾರು 200 ಮೀಟರ್ ಅಂತರವಿದೆ. ನನಗೆ ರಕ್ತಗಾಯವಾಗಿತ್ತು ಎಂದರೆ ಸರಿ. ಪೋಲೀಸರಿಗೆ ನಾನು ನನ್ನ ಮೊಬೈಲ್ ನ್ನು ನೀಡಿರುವುದಿಲ್ಲ. ನಿಪಿ-1 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಂತರ ನಾನು ಯಾವ ವಾಹನದಲ್ಲಿ ಬಂದಿರುತ್ತೇನೆ ಎಂದು ಮತ್ತು ಅದರ ಸಂಖ್ಯೆ ಹೇಳಲಾಗುವುದಿಲ್ಲ. ಸದರಿ ವಾಹನ ನನಗೆ ಪರಿಚಯದವರದ್ದು ಆಗಿದ್ದು ಈ ಅಂಶವನ್ನು ನಿಪಿ-1 ರಲ್ಲಿ ಬರೆಸಿದ್ದೇನೆ. ನಿಪಿ-4 ನ್ನು ನಾನೇ ಬರೆದುಕೊಟ್ಟಿರುತ್ತೇನೆ. ನಿಪಿ-4 ಕ್ಕೆ ನನ್ನ ಜೊತೆ ಚಾಸಾ-2, ಚಾಸಾ-4 ಮತ್ತು ಗಿರೀಶ್ ರವರು ಸಹಿ ಮಾಡಿರುತ್ತಾರೆ. ಚಾಸಾ-2 ರವರು ನಮ್ಮ ಊರಿನವರು ಎಂದರೆ ಸರಿ.

2)ನ ಪೊಲೀಸರಿಗೆ ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದರೆ ಸರಿ. ನನ್ನ ಸರವನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪೋಲೀಸರು ಯಾವುದೇ ಮಹಜರ್ ಕ್ರಮ ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಯಾವುದೇ ಫೋಟೋ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಸೀರೆಯನ್ನು ಪೊಲೀಸರಿಗೆ ನೀಡಿಲ್ಲ. ಆರೋಪಿಯನ್ನು ನಾನು ಇದೇ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಯಾವ ದಿನಾಂಕ ಮತ್ತು ಸಮಯ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**